# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಓಲಿವರ್ ಒಸಾಲ್ಡ್ ಪಿಂಟೋ, ಗ್ರೇಡ್–1 ಕಾರ್ಯದರ್ಶಿ, ಅಡ್ಯಾರು ಗ್ರಾಮ ಪಂಚಾಯಿತಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿಯ ಬಗ್ಗೆ–ಆದೇಶ.

**ಓದಲಾಗಿದೆ:**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ದಕ್ಷಿಣ ಕನ್ನಡ ಜಿಲ್ಲೆ, ರವರ ಆದೇಶ ಸಂಖ್ಯೆ: ದಕಜಿಪ/ಆಡಳಿತ/ಶಿಸ್ತು/ಸಿಆರ್–26/2012–13(ಎ6), ದಿನಾಂಕ:19–01–2017.
2. ಶ್ರೀ ಓಲಿವರ್ ಒಸಾಲ್ಡ್ ಪಿಂಟೋ, ಗ್ರೇಡ್–1 ಕಾರ್ಯದರ್ಶಿ, ರವರು ಸರ್ಕಾರಕ್ಕೆ ಸಲ್ಲಿಸಿದ ಮೇಲ್ಮನವಿ ದಿನಾಂಕ:04–09–2017.
3. ಸರ್ಕಾರದಿಂದ ವಿಚಾರಣೆಗೆ ಹಾಜರಾಗಲು ನೀಡಿದ ತಿಳುವಳಿಕೆ ಪತ್ರ ದಿನಾಂಕ: 28–10–2017.

**ಪ್ರಸ್ತಾವನೆ :**

**ಶ್ರೀ ಓಲಿವರ್ ಒಸಾಲ್ಡ್ ಪಿಂಟೋ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ(ಗ್ರೇಡ್–1)**ರವರು 2008–09 ರಿಂದ 2011–12 ರವರೆಗೆ ನೀರುಮಾರ್ಗ ಗ್ರಾಮ ಪಂಚಾಯತ್, ಮಂಗಳೂರು ತಾಲ್ಲೂಕು, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಂಡಿದ್ದು, ಎಂಜಿಎನ್ಆರ್ಇಜಿಎ ಯೋಜನೆಯ ಮಾರ್ಗಸೂಚಿಯನ್ನು ಹಾಗೂ ಕರ್ನಾಟಕ ಪಂಚಾಯತ್ ರಾಜ್(ಗ್ರಾಮ ಪಂಚಾಯತ್‌ಗಳ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮ 2006ರ ನಿಯಮಗಳನ್ನು ಉಲ್ಲಂಘಿಸಿ,

**ಆರೋಪ 1:–** ಉಳಬೈಲು ಕಂಪೊಟ್ಟು ಬಳಿ ನಾಲಾಬದು ರಚನೆ ಕಾಮಗಾರಿಯ ಕುಶಲ ಕಾರ್ಮಿಕರಿಗೆ NMR ನಿರ್ವಹಿಸದೆ ಅಳತೆ ಪುಸ್ತಕದಲ್ಲಿ ಮೌಲ್ಯಮಾಪನ ನಮೂದಿಸದೇ, ಸ್ವಂತ ಚೆಕ್‌ನಲ್ಲಿ ಕೂಲಿ ಕಾರ್ಮಿಕರಿಗೆ ವೇತನವನ್ನು ನಗದೀಕರಿಸಿ ನೇರವಾಗಿ ಗುತ್ತಿಗೆದಾರರಿಗೆ ರೂ.1,08,838/–ನ್ನು ನಿಯಮಬಾಹಿರವಾಗಿ ಪಾವತಿಸಿ ಹಣ ದುರುಪಯೋಗಪಡಿಸಿಕೊಂಡಿರುತ್ತಾರೆ.

**ಆರೋಪ 2:–** ಕೆಮ್ಮಾಜೆ ನಾಲಾಬದು ರಚನೆ ಕಾಮಗಾರಿಯನ್ನು ಎಂಜಿಎನ್ಆರ್ಇಜಿಎ ಯೋಜನೆಯಡಿ ಕೈಗೊಂಡು, ಕಾಮಗಾರಿಯ ಕುಶಲ ಕಾರ್ಮಿಕರಿಗೆ NMR ನಿರ್ವಹಿಸದೆ ಅಳತೆ ಪುಸ್ತಕದಲ್ಲಿ ಮೌಲ್ಯಮಾಪನ ನಮೂದಿಸದೇ ರೂ. 1,06,082/–ಗಳನ್ನು ಸ್ವಂತ ಚೆಕ್‌ನಲ್ಲಿ ನಗದೀಕರಿಸಿ ನೇರವಾಗಿ ಕಾರ್ಮಿಕರ ವೇತನವನ್ನು ದಿನಾಂಕ:31–03–2009 ರಂದು ಗುತ್ತಿಗೆದಾರರಾದ ಶ್ರೀ ವಿಶುಕುಮಾರ್ ಮತ್ತು ಶ್ರೀ ಶಿವಪ್ಪ ಸುವರ್ಣ ಬೊಂಡಂತಿಲ ಇವರಿಗೆ ಪಾವತಿಸಿರುತ್ತಾರೆ.

**ಆರೋಪ 3:–** ಪೆದಮಲೆ ಮಾಧವರ ಮನೆ ಬಳಿ ನಾಲಾಬದು ರಚನೆ ಕಾಮಗಾರಿಯ ಕುಶಲ ಕಾರ್ಮಿಕರಿಗೆ NMR ನಿರ್ವಹಿಸದೆ ಅಳತೆ ಪುಸ್ತಕದಲ್ಲಿ ಕಾರ್ಮಿಕರ ವೇತನ ರೂ.19,878/– ಪಾವತಿಸಿದ ಬಗ್ಗೆ ಮೌಲ್ಯಮಾಪನ ನಮೂದಿಸದೇ, ಸ್ವಂತ ಚೆಕ್‌ನಲ್ಲಿ ಕೂಲಿ ಕಾರ್ಮಿಕರಿಗೆ ವೇತನವನ್ನು ನಗದೀಕರಿಸಿ ಕಾರ್ಮಿಕರ ವೇತನವನ್ನು ನೇರವಾಗಿ ಗುತ್ತಿಗೆದಾರರಿಗೆ ಪಾವತಿಸಿ ಸರಕಾರಕ್ಕೆ ನಷ್ಟ ಉಂಟುಮಾಡಿರುತ್ತಾರೆ.

**ಆರೋಪ 4:–** ಸತ್ತಿಕಲ್ಲು ಬಳಿ ನಾಲಾಬದು ರಚನೆ ಕಾಮಗಾರಿಯ ಕುಶಲ ಕಾರ್ಮಿಕರಿಗೆ NMR ನಿರ್ವಹಿಸದೆ ಸ್ವಂತ ಚೆಕ್ ಮೂಲಕ ಪಾವತಿಸಬಾರದೆಂಬ ಸ್ಪಷ್ಟ ನಿರ್ದೇಶನವಿದ್ದರೂ, ಉಲ್ಲಂಘಿಸಿ ಕಾರ್ಮಿಕರ ವೇತನ ರೂ. 74,018/–ನ್ನು ಗುತ್ತಿಗೆದಾರರಾದ ಶ್ರೀ ಪದ್ಮನಾಭ ಕೋಟ್ಯಾನ್‌ರವರಿಗೆ ಪಾವತಿಸಿ ಸರಕಾರಕ್ಕೆ ನಷ್ಟ ಉಂಟುಮಾಡಿರುತ್ತಾರೆ.

**ಆರೋಪ 5:–** ಶಂಕರಶೆಟ್ಟಿ ಮನೆ ಬಳಿ ಕಿಂಡಿ ಅಣೆಕಟ್ಟು ರಚನೆ ಕಾಮಗಾರಿಯ NMR ನಿರ್ವಹಿಸದೆ ಸ್ವಂತ ಚೆಕ್ ಮೂಲಕ ಪಾವತಿಸಬಾರದೆಂಬ ಸ್ಪಷ್ಟ ನಿರ್ದೇಶನವಿದ್ದರೂ, ಉಲ್ಲಂಘಿಸಿ ಕಾರ್ಮಿಕರ ವೇತನ ರೂ. 12,512/–ನ್ನು ಗುತ್ತಿಗೆದಾರರಾದ ಶ್ರೀ ವಿಘುಕುಮಾರ್ ಪಕ್ಕಳಪಾದೆ, ಬೊಂಡಂತಿಲ, ರವರಿಗೆ ಪಾವತಿಸಿ ಸರಕಾರಕ್ಕೆ ನಷ್ಟ ಉಂಟುಮಾಡಿರುತ್ತೀರಿ ಹಾಗೂ ಕಾಮಗಾರಿಯ ಮೌಲ್ಯಮಾಪನ ದಾಖಲಿಸಿದ ಅಳತೆ ಪುಸ್ತಕದಲ್ಲಿ ದಿನಗೂಲಿ ಪಾವತಿಸಿದ ಬಗ್ಗೆ ದಾಖಲಿಸಿರುವುದಿಲ್ಲ.

**ಆರೋಪ 6:–** ಕೆಮ್ಮಾಜೆ ಬಳಿ ನಾಲಾತಡೆಗೋಡೆ ರಚನೆ ಕಾಮಗಾರಿಯನ್ನು ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ ಕೈಗೊಂಡಿದ್ದು, ಸ್ವಂತ ಚೆಕ್‌ನಲ್ಲಿ ಹಣ ನಗದೀಕರಿಸಿ ಮರಳು ಜೆಲ್ಲಿ, ಸಿಮೆಂಟ್ ಸಾಗಾಟ ಬಾಬ್ತು ರೂ. 13,652/–ನ್ನು ಶ್ರೀ ಶಿವಪ್ಪ ಸುವರ್ಣ ಇವರಿಗೆ ಪಾವತಿಸಿರುತ್ತಾರೆ.

**ಆರೋಪ 7:–** ಸತ್ತಿಕಲ್ಲು ನಾಲಾಬದು ರಚನೆ ಕಾಮಗಾರಿಯನ್ನು ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ ಕೈಗೊಂಡಿದ್ದು ಕಾಮಗಾರಿಯ ಸಾಮಾಗ್ರಿ ಸಾಗಾಟ ವೆಚ್ಚ ಬಾಬ್ತು ರೂ.67,424/–ನ್ನು ಗುತ್ತಿಗೆದಾರರಾದ ಶ್ರೀ ಪದ್ಮನಾಭ ಕೋಟ್ಯಾನ್ ರವರಿಗೆ ಪಾವತಿಸಿರುತ್ತಾರೆ.

**ಆರೋಪ 8:–** ಪೆದಮಾಲೆ ಮಾಧವ ಮನೆ ಬಳಿ ನಾಲಾಬದು ರಚನೆ ಕಾಮಗಾರಿಯನ್ನು ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ ಕೈಗೊಂಡಿದ್ದರೂ, ಸ್ವಂತ ಚೆಕ್‌ನಲ್ಲಿ ನಗದೀಕರಿಸಿ ರೂ.2379/–ಗಳನ್ನು ಕೊಳವೂರು ಟ್ರಾನ್ಸ್ ಪೋರ್ಟ್ ಕಿನ್ನಿಕಂಬ್ಳ ಇವರಿಗೆ ಮರಳು, ಜಲ್ಲಿ, ಸಿಮೆಂಟ್ ಸಾಗಾಟದ ಬಾಬ್ತು ಪಾವತಿಸಿ ಆರೋಪ ಎಸಗಿರುತ್ತಾರೆ.

**ಆರೋಪ 9:–** ಉಳಬೈಲು ಬಳಿ ನಾಲಾ ತಡೆಗೋಡೆ ರಚನೆ ಕಾಮಗಾರಿಯನ್ನು ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ ಕೈಗೊಂಡಿದ್ದು, ಕಾಮಗಾರಿಯ ಆಡಳಿತ ವೆಚ್ಚ ರೂ.22,854/–ನ್ನು ಸ್ವಂತ ಚೆಕ್ ಮೂಲಕ ನಗದೀಕರಿಸಿ ನಿಯಮ ಬಾಹಿರವಾಗಿ ಗುತ್ತಿಗೆದಾರರಿಗೆ & ಇತರರಿಗೆ ನೇರವಾಗಿ ಸಂದಾಯ ಮಾಡಿರುತ್ತಾರೆ.

**ಆರೋಪ 10:–** ಕೆಮ್ಮಾಜೆ ಬಳಿ ನಾಲ ತಡೆಗೋಡೆ ರಚನೆ ಕಾಮಗಾರಿಯನ್ನು ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ ಕೈಗೊಂಡಿದ್ದು, ಕಾಮಗಾರಿಯ ಆಡಳಿತ ವೆಚ್ಚ ರೂ.22,081/–ನ್ನು ಸ್ವಂತ ಚೆಕ್ ಮೂಲಕ ನಗದೀಕರಿಸಿ ನಿಯಮ ಬಾಹಿರವಾಗಿ ಗುತ್ತಿಗೆದಾರರಿಗೆ & ಇತರರಿಗೆ ನೇರವಾಗಿ ಸಂದಾಯ ಮಾಡಿರುತ್ತಾರೆ.

**ಆರೋಪ 11:–** ಉಳಬೈಲು ಬಳಿ ನಾಲಾ ತಡೆಗೋಡೆ ರಚನೆ ಕಾಮಗಾರಿಯನ್ನು ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ ಕೈಗೊಂಡಿದ್ದು, 50 ಚೀಲ ಸಿಮೆಂಟನ್ನು TN ಎಂಟರ್‌ಪ್ರೈಸಸ್ ರವರಿಂದ ಪಡೆದಿದ್ದು ಉಪಯೋಗಿಸಿದ ಕಾಮಗಾರಿಯ ಮೌಲ್ಯಮಾಪನ ವಿವರ ಲಭ್ಯವಿಲ್ಲ. ಅಲ್ಲದೆ ಮಾರ್ಗಸೂಚಿ ಉಲ್ಲಂಘಿಸಿ ರೂ. 14,000/–ನ್ನು ಸ್ವಂತ ಚೆಕ್ ಮೂಲಕ ನಗದೀಕರಿಸಿ ಗುತ್ತಿಗೆದಾರರಿಗೆ ಪಾವತಿಸಿರುತ್ತಾರೆ.

**ಆರೋಪ 12:–** ಸೇಸಪ್ಪ ಬೆಳ್ಚಾಡರ ಮನೆ ಬಳಿ ನೀರು ಶೇಖರಣಾ ಕೆರೆಗೆ ತಡೆಗೋಡೆ ರಚನೆ ಕಾಮಗಾರಿಯನ್ನು ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ ಕೈಗೊಂಡಿದ್ದು, ರೂ. 18,856/–ನ್ನು ಸ್ವಂತ ಚೆಕ್ ಮೂಲಕ ನಗದೀಕರಿಸಿ ಗುತ್ತಿಗೆದಾರರಾದ ಶ್ರೀ ಶಿವಪ್ಪ ಸುವರ್ಣ, ಬೊಂಡಂತಿಲ ಇವರಿಗೆ ಪಾವತಿಸಿರುತ್ತಾರೆ ಹಾಗೂ ರಾಜಧನ, ಮಾರಾಟ ತೆರಿಗೆ ಸರ್ಕಾರಕ್ಕೆ ಜಮಾ ಮಾಡಿದ ಚಲನ್ ಹಾಜರುಪಡಿಸಿರುವುದಿಲ್ಲ.

**ಆರೋಪ 13:–** ಗಣಕಯಂತ್ರದಲ್ಲಿ ಕರ್ತವ್ಯ ನಿರ್ವಹಿಸಿದ ಶ್ರೀ ಧನುಶ್ರೀ ಎಂಬುವರಿಗೆ ರೂ.3500/–ಗಳನ್ನು ಸ್ವಂತ ಚೆಕ್‌ನಲ್ಲಿ ಪಾವತಿಸಿರುತ್ತಾರೆ ಎಂಬ ಆರೋಪಗಳಿಗೆ ಸಂಬಂಧಿಸಿದಂತೆ, ಇಲಾಖಾ ವಿಚಾರಣೆ ಕಾಯ್ದಿರಿಸಿ, ಸದರಿ ನೌಕರರನ್ನು ಅಮಾನತ್ತುಗೊಳಿಸಲಾಗಿತ್ತು.

ಶ್ರೀ ಯೋಗೇಶ್.ಎಚ್.ಆರ್, ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಜಿಲ್ಲಾಪಂಚಾಯತ್, ಮಂಗಳೂರುರವರನ್ನು ವಿಚಾರಣಾಧಿಕಾರಿಗಳಾಗಿ ನೇಮಿಸಲಾಗಿತ್ತು. ಸದರಿಯವರು ದಿನಾಂಕ: 01–04–2016ರಂದು ಇಲಾಖಾ ವಿಚಾರಣಾ ವರದಿಯನ್ನು ಶಿಸ್ತುಪ್ರಾಧಿಕಾರಿಗಳಿಗೆ ಸಲ್ಲಿಸಿದ್ದು,

ವಿಚಾರಣಾ ವರದಿಯಲ್ಲಿ. ಆಪಾದಿತ ನೌಕರರ ವಿರುದ್ಧ ಮಾಡಲಾದ ಆರೋಪಗಳಲ್ಲಿ. ಆರೋಪ ಸಂಖ್ಯೆ 1 ರಿಂದ 7ರವರೆಗಿನ ಆರೋಪಗಳು ಸಾಬೀತಾಗಿರುತ್ತವೆ. ಆರೋಪ 8.9.10 ಹಾಗೂ 11 ಭಾಗಶಃ ಸಾಬೀತಾಗಿರುತ್ತವೆ. ಹಾಗೂ 12 ಮತ್ತು 13ರ ಆರೋಪಗಳು ಸಾಬೀತಾಗಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ.

ಮುಂದುವರಿದು. ವಿಚಾರಣಾ ಸಂದರ್ಭದಲ್ಲಿ ಆರೋಪಗಳಲ್ಲಿರುವಂತೆ ಎಂಜಿಎನ್‌ಆರ್‌ಇಜಿಎ ಯೋಜನೆಯಡಿ ಕೈಗೊಂಡ ಎಲ್ಲಾ ಕಾಮಗಾರಿಗಳ ಗುಣಮಟ್ಟ ಹಾಗೂ ಪ್ರಮಾಣದ ಬಗ್ಗೆ ಯಾವುದೇ ಲೋಪಗಳು ಇರುವ ಕುರಿತು ದಾಖಲಾಗಿರುವುದಿಲ್ಲ. ಆರೋಪದಲ್ಲಿರುವ ಎಲ್ಲಾ ಕಾಮಗಾರಿಗಳನ್ನು ತಾಂತ್ರಿಕವಾಗಿ ಪರಿಶೀಲಿಸಿ ಸಂಬಂಧಿಸಿದ ತಾಂತ್ರಿಕ ಅಧಿಕಾರಿಗಳು ಅಳತೆ ಪುಸ್ತಕದಲ್ಲಿ ದಾಖಲಿಸಿರುವುದು ಕಂಡುಬಂದಿದೆ. ಆದುದರಿಂದ ಕಾಮಗಾರಿಗಳು ಅನುಷ್ಠಾನವಾಗಿರುವುದರ ಬಗ್ಗೆ ಯಾವುದೇ ಲೋಪಗಳು ಇರುವುದಿಲ್ಲ.ಕಾಮಗಾರಿ ಅನುಷ್ಠಾನದ ನಂತರ ಮೊತ್ತವನ್ನು ಪಾವತಿಸುವ ಮುನ್ನ ಆಪಾದಿತರು ಕಾಮಗಾರಿ ಅನುಷ್ಠಾನ ಸಂಸ್ಥೆಗಳಿಗೆ ಹಣ ಪಾವತಿಸಿಲ್ಲದಿರುವ ಬಗ್ಗೆಯೂ ಆರೋಪಗಳಿರುವುದಿಲ್ಲ. ಆದರೇ ಪಾವತಿ ವಿಧಾನದಲ್ಲಿ ಆಪಾದಿತರು ನಿಯಮಗಳನ್ನು ಪಾಲಿಸದಿಲ್ಲದಿರುವ ಬಗ್ಗೆ ವಿಚಾರಣೆ ಸಂದರ್ಭದಲ್ಲಿ ಸಾಂದರ್ಭಿಕವಾಗಿ ಲಭ್ಯವಿರುವ ಅಗತ್ಯ ದಾಖಲಾತಿ, ಹೇಳಿಕೆಗಳು, ವರದಿ ಇತ್ಯಾದಿಗಳನ್ನು ಸಾಕ್ಷಿಗಳನ್ನಾಗಿ ಪರಿಗಣಿಸಿ ಮೇಲಿನಂತೆ ಅಭಿಪ್ರಾಯಿಸಲಾಗಿದೆ. ಶಿಸ್ತುಪ್ರಾಧಿಕಾರವು ಈ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಅಂತಿಮವಾಗಿ ನಿರ್ಧಾರ ಕೈಗೊಳ್ಳಬಹುದಾಗಿದೆ ಎಂದು ಅಭಿಪ್ರಾಯ ನೀಡಿರುತ್ತಾರೆ.

ವಿಚಾರಣಾ ವರದಿಯಲ್ಲಿ ಆಪಾದಿತ ನೌಕರರು. ಎಂಜಿಎನ್‌ಆರ್‌ಇಜಿಎ ಯೋಜನೆಯಡಿ ಕರ್ತವ್ಯಲೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ ದಕ್ಷಿಣ ಕನ್ನಡ, ಇವರ ತಮ್ಮ ಆದೇಶ ಸಂಖ್ಯೆ:ದಕಜಿಪ/ಆಡಳಿತ/ಶಿಸ್ತು/ಸಿಆರ್-26/2012-13(ಎ6), ದಿನಾಂಕ:19-01-2017ರ ಆದೇಶದಲ್ಲಿ ಸದರಿ ನೌಕರರ ಒಂದು ವಾರ್ಷಿಕ ವೇತನಬಡ್ತಿಯನ್ನು ಸಂಚಿತಪರಿಣಾಮರಹಿತವಾಗಿ ತಡೆಹಿಡಿದು ಆದೇಶಿಸಿರುತ್ತಾರೆ ಹಾಗೂ ಅಮಾನತ್ತಿನ ಅವಧಿಯನ್ನು ಅಮಾನತ್ತಿನ ಅವಧಿಯೆಂದು ಪರಿಗಣಿಸಿ ಆದೇಶಿಸುತ್ತಾರೆ.

ಈ ಆದೇಶದ ವಿರುದ್ಧ ಶ್ರೀ ಓಲಿವರ್ ಒಸಾಲ್ಡ್ ಪಿಂಟೋರವರು ಮೇಲ್ಮನವಿಯನ್ನು ಸಲ್ಲಿಸಿದ್ದು, ನಿಗದಿತ ಅವಧಿಯಲ್ಲಿ ಅಪೀಲು ಸಲ್ಲಿಸಲು ಸಾಧ್ಯವಾಗದಿರುವ ಬಗ್ಗೆ ಕಾಲವಿಳಂಬ ಮಾಫಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ಬಗ್ಗೆ ದಿನಾಂಕ:03-11-2017ರಂದು ವಿಚಾರಣೆಯಂದು ವಿಚಾರಣೆಯನ್ನು ನಡೆಸಲಾಯಿತು. ಜಿಲ್ಲಾ ಪಂಚಾಯಿತಿ ಪರವಾಗಿ ಸಹಾಯಕ ಯೋಜನಾಧಿಕಾರಿಯಾದ ಶ್ರೀ ಸಚಿನ್‌ಕುಮಾರ್ ರವರು ಹಾಗೂ ಅರ್ಜಿದಾರರು ಹಾಜರಿದ್ದರು.

ಅರ್ಜಿದಾರರು 2008-09ನೇ ಸಾಲಿನಲ್ಲಿ ಎಂಜಿಎನ್‌ಆರ್‌ಇಜಿಎ ಯೋಜನೆಯು ಹೊಸದಾಗಿ ಅನುಷ್ಠಾನಗೊಂಡ ಸಮಯದಲ್ಲಿ ಎಸ್ ಜೆ ಆರ್ ವೈ ಯೋಜನೆಯ ಮಾರ್ಗಸೂಚಿಯ ಪ್ರಕಾರ ತಾವು ಕೂಲಿಹಣವನ್ನು ನಗದಾಗಿ ಪಾವತಿಸಿರುತ್ತೇನೆ ಹಾಗೂ 2008-09ನೇ ಸಾಲಿನ ಅಂತ್ಯದಲ್ಲಿ ಅಂದರೆ ಮಾರ್ಚಿ ತಿಂಗಳಲ್ಲಿ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸಿ ಬಿಲ್ಲುಗಳನ್ನು ಪಾವತಿಸುವಂತೆ ತೀವ್ರ ಒತ್ತಡವಿದ್ದುದರಿಂದ ತಾವು ನಗದಾಗಿ ಪಾವತಿಸಿರುವುದಾಗಿ ಹಾಗೂ ಸದ್ಭಾವನೆಯಿಂದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿರುವುದಾಗಿ, ಆದುದರಿಂದ ತಮಗೆ ವಿಧಿಸಿರುವ ದಂಡನೆಯನ್ನು ರದ್ದುಪಡಿಸುವಂತೆ ಕೋರಿರುತ್ತಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆಪಾದಿತ ನೌಕರರು ಹಾಜರಿದ್ದು ತಮ್ಮ ಹೇಳಿಕೆ ನೀಡಿರುತ್ತಾರೆ ಈ ಮೇಲ್ಮನವಿಗೆ ಸಂಬಂಧಿಸಿದಂತೆ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ಶ್ರೀ ಓಲಿವರ್ ಒಸಾಲ್ಡ್ ಪಿಂಟೋರವರ ವಿರುದ್ಧದ ಆರೋಪಗಳು ಸಾಬೀತಾಗಿರುತ್ತದೆ. ಈ ಮೇಲ್ಮನವಿಯ ಬಗ್ಗೆ ವಾಸ್ತವಾಂಶಗಳನ್ನು ಪರಿಶೀಲಿಸಿ, ಮನದಟ್ಟು ಮಾಡಿಕೊಂಡು

ಮೇಲ್ಮನವಿಯನ್ನು ಪುರಸ್ಕರಿಸುವಂತಹ ಯಾವುದೇ ಪ್ರಬಲವಾದ ಕಾರಣಗಳು/ದಾಖಲಾತಿಗಳು ಇಲ್ಲದೇ ಇರುವುದರಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಆದೇಶವನ್ನು ಎತ್ತಿಹಿಡಿಯಲ್ಪಾಯಿತು.

ಆದುದರಿಂದ ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/725/ಗ್ರಾಪಂಕಾ/2017**

**ಬೆಂಗಳೂರು, ದಿನಾಂಕ:07-03-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, **ಶ್ರೀ ಒಲಿವರ್ ಒಸಾಲ್ಡ್ ಪಿಂಟೋ,** ಗ್ರೇಡ್-1 ಕಾರ್ಯದರ್ಶಿ, ಅಡ್ಯಾರು ಗ್ರಾಮ ಪಂಚಾಯಿತಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, ರವರಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ. ಜಿಲ್ಲಾ ಪಂಚಾಯಿತಿ, ದಕ್ಷಿಣ ಕನ್ನಡ ಜಿಲ್ಲೆ, ರವರು ವಿಧಿಸಿದ್ದ ದಂಡನಾದೇಶ ಸಂಖ್ಯೆ: ಆದೇಶ ಸಂಖ್ಯೆ: ದಕಜಿಪ/ಆಡಳಿತ/ಶಿಸ್ತು/ಸಿಆರ್-26/2012-13(ಎ6); ದಿನಾಂಕ: 19-01-2017ರ ಆದೇಶವನ್ನು ಎತ್ತಿಹಿಡಿದು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

8/3

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ದಕ್ಷಿಣ ಕನ್ನಡ ಜಿಲ್ಲೆ.
3) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
4) ಶ್ರೀ ಒಲಿವರ್ ಒಸಾಲ್ಡ್ ಪಿಂಟೋ, ಗ್ರೇಡ್-1 ಕಾರ್ಯದರ್ಶಿ, ಅಡ್ಯಾರು ಗ್ರಾಮ ಪಂಚಾಯಿತಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
5) ಶಾಖಾ ರಕ್ಷಕ ಪ್ರತಿ.